# ಅಂಬೇಡ್ಕರ್: ಅಸ್ಪೃಶ್ಯರ ಆರ್ಥಿಕ ಸ್ವಾವಲಂಬನೆಗಾಗಿ ನಡೆಸಿದ ಚಿಂತನೆಗಳು

**ನವೀನ್ ಕುಮಾರ ಎ. ಜಿ.**

ಸಹ ಶಿಕ್ಷಕರು, ವಿಶ್ವದರ್ಶನ ಪ್ರೌಢಶಾಲೆ, ಇಡಗುಂದಿ, ಉತ್ತರ ಕನ್ನಡ.

DOI: https://doi.org/10.5281/zenodo.15504345

## ABSTRACT:

ಇಂದು ಪರಿಶಿಷ್ಟ ಜಾತಿ, ವರ್ಗ, ಹಿಂದುಳಿದ ವರ್ಗಗಳ ಏಳಿಗೆಯು ಒಂದು ರಾಷ್ಟ್ರೀಯ ಸಮಸ್ಯೆಯಾಗಿ ಉಳಿಯುತ್ತ ಬಂದಿದೆ. ಕಳೆದ ನಲವತ್ತು ವರ್ಷಗಳಿಂದ ಅಂದರೆ 1991 ರಿಂದ ಮಾಹಿತಿ ತಂತ್ರಜ್ಞಾನದಿಂದ ಪ್ರಾರಂಭವಾಗಿ 2018ರ ಮೇಕಿಂಗ್ ಇಂಡಿಯಾ ವರೆಗೆ ಅನೇಕ ಯೋಜನೆಗಳು ಹತ್ತಾರು ಭಾಗ್ಯಗಳು ಅಪಾರ ಪ್ರಮಾಣದ ಆರ್ಥಿಕ ನೆರವು ನೀಡಲಾಗಿದೆ. ಆದರೂ ಸಮಾಜದಲ್ಲಿ ಆರ್ಥಿಕ ದುರ್ಬಲ ವರ್ಗ ಸಮಾಜಿಕವಾಗಿ ಮುಖ್ಯವಾಹಿನಿಯಲ್ಲಿ ಬಂದು ಮಹತ್ತರವಾದ ಸಾಧನೆ ಮಾಡುವಲ್ಲಿ ವಿಫಲವಾಗಿದೆ. ಬಡತನ ನಿರ್ಮೂಲನೆ ಅಸಾಧ್ಯವೇನೋ ಅನಿಸುವಷ್ಟರ ಮಟ್ಟಕ್ಕೆ ಬಂದು ನಿಂತಿದೆ. ದೌರ್ಜನ್ಯ, ದಬ್ಬಾಳಿಕೆ, ಕೊಲೆ, ಸುಲಿಗೆ, ಮೋಸ, ಸಂಪತ್ತಿನ ಕ್ರೋಢಿಕರಣಕ್ಕಾಗಿ ನಡೆಯುತ್ತ ಕಾನೂನೆ ಭಯಪಡುವ ಮಟ್ಟಕ್ಕೆ ನಡೆಯುತ್ತಿವೆ. ಇದರ ಪರಿಣಾಮ ಜನ ಅನ್ಯ ಧರ್ಮಕ್ಕೆ ಮತಾಂತರ ಹೊಂದುತ್ತ ಅಲ್ಲಿಯೂ ನೆಮ್ಮದಿ ಕಾಣದೆ, ಅತ್ತ ಇರಲೂ ಆಗದೆ ಇತ್ತ ಬದುಕಲೂ ಆಗದೆ ನರಳುತ್ತಿದ್ದಾರೆ. ಮತಾಂತರದಲ್ಲೂ ಹಣ ಸಂಪಾದನೆ ಮಾಡುತ್ತಿರುವ ಹುನ್ನಾರಗಳು ಕಂಡುಬರುತ್ತಿವೆ. ಇಷ್ಟಾದರೂ ಅಸ್ಪೃಶ್ಯತೆ, ಜಾತಿಯತೆಯ ಪಿಡುಗು ಸಮಸ್ಯೆಯಾಗಿಯೇ ಉಳಿದಿದೆ. ವಿದ್ಯಾವಂತ ಪ್ರಜ್ಞಾಹೀನನಾಗಿ ಮಾನವೀಯತೆ ಮರೆತಿದ್ದಾನೆ, ತತ್ತ್ವಸಿದ್ಧಾಂತಗಳು ಭ್ರಷ್ಟತೆಯಲ್ಲಿ ಕಳೆದು ಹೋಗಿದೆ. ಈ ಕಾಲಘಟ್ಟಕ್ಕೆ ರಾಷ್ಟ್ರಭಕ್ತಿಯುಳ್ಳ ಪ್ರತಿಯೊಬ್ಬ ಚಿಂತಕನೂ ಮತ್ತೆ ಮತ್ತೆ ಅಂಬೇಡ್ಕರ್‌ರ ಸಮಸಮಾನತೆಯ ವಿಚಾರಗಳನ್ನು ಚರ್ಚಿಸುವ ಅವಶ್ಯಕತೆ ಇಂದಿಗೆ ಅಗತ್ಯವೂ, ಅವಶ್ಯವೂ ಆಗಿದೆ. ಇಂತಹ ಕಾರ್ಯವನ್ನು ಸ್ವಾತಂತ್ರ್ಯ ಪೂರ್ವದಲ್ಲೆ ಅಂಬೇಡ್ಕರ್‌ರು ಈ ನೆಲದ ಅಸ್ಪೃಶ್ಯರಿಗಾಗಿ ಅಧ್ಯಾಯನ ಮಾಡಿ ಗ್ರಂಥರೂಪದಲ್ಲಿರಿಸಿ ಹೋಗಿದ್ದಾರೆ ಅದನ್ನು ಅಧ್ಯಾಯನ ಮಾಡಿ ಅನುಷ್ಠಾನಗೊಳಿಸುವ ಇಚ್ಛಾಶಕ್ತಿಯಾಗಲಿ ನಮ್ಮ ಜನರಲ್ಲಿ ಕಾಣುತ್ತಿಲ್ಲ. ಆಳುವವರಿಗೆ ಮನಸ್ಸಾಗುತ್ತಿಲ್ಲ. ಅಗತ್ಯವಿರುವವರು ಬೇಡಿಕೆಯನ್ನು ಮುಂದಿಡುತ್ತಿಲ್ಲ. ಈ ವಿಶಾದಕರ ವಿಚಾರವನ್ನು ಈ ಲೇಖನವು ಸಾಕ್ಷಿಕರಿಸಿದೆ.

## KEYWORDS:

ಅಸ್ಪೃಶ್ಯತೆ, ಅಂಬೇಡ್ಕರ್ ಚಿಂತನೆ, ಅಸಮಾನತೆ, ಜಾತಿ ಪದ್ಧತಿ, ವ್ಯವಸ್ಥೆ.

**ಪೀಠಿಕೆ:**

ನಾವು ಸಾಮಾಜಿಕವಾಗಿ, ಧಾರ್ಮಿಕವಾಗಿ ಒಂದು ಜನಾಂಗಕ್ಕೆ ಶತಮಾನಗಳಿಂದ ವಂಚನೆ ಮಾಡಿದ್ದೇವೆ. ಪಶುಪಕ್ಷಿಗಳಿಗಿಂತ ಕೀಳಾಗಿ ಕಂಡಿದ್ದೇವೆ. ಈ ತಪ್ಪನ್ನ ತಿದ್ದಿ ಕೊಳ್ಳಬೇಕಾಗಿದೆ. ಈ ರಾಷ್ಟ್ರದಲ್ಲಿ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾದವರೆಂಬ ಅಭಿಪ್ರಾಯ ಯಾರಲ್ಲೂ ಇರಬಾರದು, ಬರಬಾರದು ಇಂತಹದ್ದೊಂದು ಮಹಾನ್ ಉದ್ದೇಶ ಸಾಧನೆಗಾಗಿ ದುಡಿದ ಮೂರು ಚೇತನಗಳೆಂದರೆ ಒಂದನೆಯದಾಗಿ ಮಹಾತ್ಮ ಗಾಂಧಿ ಎರಡನೆಯದಾಗಿ ಲೋಹಿಯಾ, ಮೂರು ಅಂಬೇಡ್ಕರ್ ಇವರುಗಳು ಭಾರತವನ್ನು ವಿವಿಧ ನೆಲೆಯಲ್ಲಿ ಉನ್ನತಿಕರಿಸಲು ಶ್ರಮಿಸಿದವರು.

ಒಂದು, ಗಾಂಧಿ ಕಂಡ ಭಾರತ, ಗಾಂಧೀಜಿ ಪರಕೀಯರ ಕೈಯಲ್ಲಿದ್ದ ಆಡಳಿತವನ್ನು ಮರುಪಡೆದು ನಮ್ಮದೇ ಆದ. ನಮ್ಮನ್ನೇ ನಾವು ಆಳಿಕೊಳ್ಳುವ "ಸ್ವರಾಜ್ಯ ರಾಜ್ಯ" ವ್ಯವಸ್ಥೆಯ ಸ್ಥಾಪನೆಗಾಗಿ ಹಗಲಿರುಳೆನ್ನದೆ ದುಡಿದು ದನಿದವರು. ಎರಡು, ಲೋಹಿಯು ಕಂಡ ಭಾರತ "ಬ್ರಿಟಿಷರೊಂದಿಗೆ ಸಾಮರಸ್ಯ ಸಾಧಿಸಿ, ವಿಶ್ವಾಸಗಳಿಸಿ ಅಧಿಕಾರ ಹಿಡಿದು ಈ ನೆಲಕ್ಕೆ ಧಾರ್ಮಿಕ, ಸಾಮಾಜಿಕ ಸ್ವಾತಂತ್ರ್ಯವನ್ನು ಒದಗಿಸಲು ಶ್ರಮಿಸಿದವರು." ಮೂರನೆಯದಾಗಿ, ಅಂಬೇಡ್ಕರ್ ಕಂಡ ಭಾರತ "ಜಾತಿಯಿಂದ ಹಿಂದೂಗಳೇ ಆಗಿದ್ದರೂ, ಹಿಂದುಗಳೆಲ್ಲೇ ಇರುವ ಜಾತಿಯತೆ, ದೇವರು, ಧರ್ಮ, ಮೌಢ್ಯತೆ ಮೂಲಕ ವಂಚಿಸಿ ಸುಖ ಪಡುವವರಿಂದ ಅಸ್ಪೃಶ್ಯರನ್ನು ಮೇಲೆತ್ತಿ ಪ್ರಧಾನವಾಗಿ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಸ್ವತಂತ್ರರನ್ನಾಗಿ ಮಾಡಬೇಕು" ಎನ್ನುವುದು. ಮೂರು ಚೇತನಗಳನ್ನು ಆಧಾರವಾಗಿಟ್ಟು ಹೇಳುವುದಾದರೆ ಬುದ್ಧ, ಬಸವನ ಕಾಲದ ನಂತರ ಶೋಷಿತ ವರ್ಗದ ಧ್ವನಿಗೆ ಓಗೊಟ್ಟು ಅದನ್ನೇ ತನು-ಮನದಲ್ಲಿ ಸ್ಮರಿಸಿ ದುಡಿದ ಮತ್ತೊಂದು ಶಕ್ತಿ ಎಂದರೆ ಬಿ. ಆರ್. ಅಂಬೇಡ್ಕರ್ ಎಂದರೆ ತಪ್ಪಾಗಲಾರದು.

**ಅಂಬೇಡ್ಕರ್: ಅಸ್ಪೃಶ್ಯರ ಆರ್ಥಿಕ ಸ್ವಾವಲಂಬನೆಗಾಗಿ ನಡೆಸಿದ ಚಿಂತನೆಗಳು**

ಬಾಬಾ ಸಾಹೇಬ ಅಂಬೇಡ್ಕರ್ ಒಬ್ಬ ನುರಿತ ಆರ್ಥಿಕತಜ್ಞರಾಗಿದ್ದರು, ಈ ವಿಚಾರದಲ್ಲಿ ಅವರದು ಬಹುಮುಖ ಪ್ರತಿಭೆಯುಳ್ಳ ವ್ಯಕ್ತಿತ್ವ, ಧಾರ್ಮಿಕ ವಿಚಾರದಲ್ಲಿ ತಲ್ಲೀನತೆ ಬಯಸಿದರೂ ಸಮಾಜ, ನನ್ನ ಸಮುದಾಯ ಎಂಬ ತುಡಿತ ಅವರನ್ನು ರಾಜಕೀಯ ರಂಗದೆಡೆ ಕೈಬೀಸಿ ಕರೆಯಿತು. ಆದರೆ ಅವರಿಗೆ ಅರ್ಥಶಾಸ್ತ್ರದಲ್ಲಿ ಅಪಾರವಾದ ಆಸಕ್ತಿ ಇದ್ದು ಅದರಲ್ಲಿ ನವೀನ ವಿಧದ ಸಂಶೋಧನೆಗಳನ್ನು ನಡೆಸುವುದಕ್ಕಾಗಿ ಹಂಬಲಿಸುತ್ತಿತ್ತು. ಈ ವಿಚಾರದಲ್ಲಿ ಬಹುದೂರ ಸಾಗಲು ಅವಕಾಶ ದೊರಕಲಿಲ್ಲ. ಡಾ. ಎಸ್. ವೆಂಕಟರಮಣ ಅವರು ಅಂಬೇಡ್ಕರ್ ಅವರನ್ನು ಕುರಿತು ಈ ರೀತಿಯಾಗಿ ಬರೆಯುತ್ತಾರೆ "ಡಾ. ಅಂಬೇಡ್ಕರ್ ಓರ್ವ ವಿದ್ವಾಂಸಕ, ಭಾರತ

ಸಂವಿಧಾನದ ಶಿಲ್ಪಿ, ಬಡವರ, ಶೋಷಿತರ ಉದ್ಧಾರಕ, ಎಂಬುದಾಗಿ ಮಾತ್ರ ತಿಳಿದಿದ್ದೇವೆ. ವಾಸ್ತವಿಕವಾಗಿ ಅವರೋರ್ವ ರಾಜಕಾರಣಿ, ಅರ್ಥವ್ಯವಸ್ಥೆಗಳ ಮೇಲೆ ಛಾಪು ಮೂಡಿಸಿದ ಮಹಾನ್ ಚಿಂತಕ. ಈ ಶತಮಾನದ ಪ್ರಥಮಾರ್ಧದಲ್ಲಿ ಭಾರತದ ಅರ್ಥವ್ಯವಸ್ಥೆಯಲ್ಲಿ ತಮ್ಮ ಕುಶಾಗ್ರಬುದ್ಧಿ ಮತ್ತು ತೇಜಸ್ವೀ ಪ್ರತಿಭೆ ಮೂಲಕ ಅರ್ಥವ್ಯವಸ್ಥೆ ವಿಶ್ಲೇಷಿಸಿದ ಓರ್ವ ಆರ್ಥಿಕತಜ್ಞ ಆಗಿದ್ದರು ಎಂಬುದು ಬಹುಮಂದಿ ವಿಚಾರವಂತರಿಗೆ ತಿಳಿದೇ ಇಲ್ಲ'' ಎಂದಿದ್ದಾರೆ.

ವಾಸ್ತವಿಕವಾಗಿ ಅಂಬೇಡ್ಕರ್ ಓರ್ವ ಆರ್ಥಿಕತಜ್ಞ ಆಗಿದ್ದರು ಎಂಬುದು ಬಹುಮಂದಿ ವಿಚಾರವಂತರಿಗೆ ತಿಳಿದೇ ಇಲ್ಲ ಎನ್ನುವುದು ಸತ್ಯವಾದ ಮಾತಾಗಿದೆ. ಈ ನೆಲೆಯಲ್ಲಿ ಅವರು ಪಡೆದ ಶಿಕ್ಷಣ, ಬರೆದ ಕೆಲವು ಪುಸ್ತಕಗಳನ್ನು ಗಮನಿಸಿದಾಗ ನಿಜಕ್ಕೂ ಅವರು ಶ್ರೇಷ್ಠ ಆರ್ಥಿಕ ವಿಚಾರವಾದಿ ಎಂಬುದು ತಿಳಿದುಬರುತ್ತದೆ. ಈ ಮಾತಿಗೆ ಪುಷ್ಠಿಯನ್ನು ನೀಡುವ ಅಂಶಗಳು ಇಂತಿವೆ,

1. 1915 ಜೂನ್ 5 ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ಸಮಾಜಶಾಸ್ತ್ರ, ನ್ಯಾಯಶಾಸ್ತ್ರದಲ್ಲಿ ವ್ಯಾಸಂಗ ಮಾಡಿ ಅರ್ಥಶಾಸ್ತ್ರದಲ್ಲಿ ''ಪ್ರಾಚೀನ ಭಾರತೀಯ ವಾಣಿಜ್ಯ'' ಎಂಬ ಪ್ರಬಂಧವನ್ನು ಬರೆದು ಕೊಲಂಬಿಯ ವಿಶ್ವವಿದ್ಯಾಲಯಕ್ಕೆ ಎಂ. ಎ ಪದವಿಗಾಗಿ ಸಲ್ಲಿಸುತ್ತಾರೆ.
2. 1917ರಲ್ಲಿ ಪಿ. ಹೆ. ಡಿ ಪದವಿಗಾಗಿ ''ಭಾರತದ ರಾಷ್ಟ್ರೀಯ ಉತ್ಪನ್ನ ಹಾಗೂ ಆದಾಯ ವಿಶ್ಲೇಷಣೆ ಅಧ್ಯಯನ'' ಎನ್ನುವ ಮಹಾಪ್ರಬಂಧ ಸಲ್ಲಿಸಿ, 1917 ಮೇ ನಲ್ಲಿ ಪಿ. ಹೆಚ್. ಡಿ ಪದವಿ ಪಡೆದರು.
3. 1918 ರಲ್ಲಿ ಸಿಡನ್ ಹ್ಯಾಂ ವಾಣಿಜ್ಯ ಮತ್ತು ಅರ್ಥಶಾಸ್ತ್ರ ಕಾಲೇಜಿನಲ್ಲಿ ರಾಜಕೀಯ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಮಾಡಿದ್ದಾರೆ.
4. 1921 ಜೂನ್ ಅರ್ಥಶಾಸ್ತ್ರದ ವಿಷಯದಲ್ಲಿ ''ಭಾರತದ ಸಾಮ್ರಾಜ್ಯಶಾಹಿ ಆರ್ಥಿಕತೆಯ ಪ್ರಾಂತೀಯ ಕೇಂದ್ರೀಕರಣ'' ಎಂಬ ಮಹಾಪ್ರಬಂಧ ಬರೆದು ಲಂಡನ್ ವಿಶ್ವವಿದ್ಯಾಲಯದಿಂದ ಎಂ, ಎಸ್ಸಿ ಪದವಿ ಪಡೆದರು.
5. 1923 ಮಾರ್ಚನಲ್ಲಿ ''ರೂಪಾಯಿ ಸಮಸ್ಯೆ ಅದರ ಹುಟ್ಟು ಹಾಗೂ ಪರಿಹಾರ'' ಎನ್ನುವ ಮಹಾಪ್ರಬಂಧ ಬರೆದು ಡಿ, ಎಸ್ಸಿ ಇನ್ ಎಕನಾಮಿಕ್ಸ ಪದವಿ ಗಳಿಸಿದರು.
6. 1926 ರಲ್ಲಿ ''ಬಹಿಷ್ಕೃತ ಹಿತಾಕಾರಿಣಿ ಸಭಾ'' ಎನ್ನುವ ಸಂಸ್ಥೆಯನ್ನು ಹುಟ್ಟುಹಾಕಿ ಅದರ ಕಾರ್ಯಕ್ರಮಗಳಲ್ಲಿ ''ಬ್ರಿಟಿಷ್ ಭಾರತದಲ್ಲಿ ಪ್ರಾಂತೀಯ ಹಣಕಾಸು'' ಎಂಬ ಕೃತಿಯಲ್ಲಿ ಬರೆದ ವಿಚಾರಗಳ ಬಗ್ಗೆ ಜನತೆಗೆ ಮನವರಿಕೆ ಮಾಡಿಸುತ್ತಾರೆ.
7. 1936 ಜನವರಿ 12 ಹಾಗೂ 13 ಶೋಷಿತ ವರ್ಗದ ಸಮ್ಮೇಳನದಲ್ಲಿ ಹಿಂಧೂ ಧರ್ಮದ ಸಾಮಾಜಿಕ ಆರ್ಥಿಕ ಅಸಮಾನತೆ ವಿರೋಧಿಸಿ ಮತಾಂತರಗೊಳ್ಳುವ ಸೂಚನೆ ನೀಡಿ ಚಳುವಳಿ ಮಾಡುತ್ತಾರೆ.
8. 1937 ಸೆಪ್ಟಂಬರ 17 ಮಹರ ಹಾಗೂ ಇತರ ವರ್ಗದವರು ವಂಶಪಾರಂಪರೆಯಾಗಿ ಕೃಷಿ ಮಾಡುವವರಿಗೆ ಸರ್ಕಾರದಿಂದ ಸಿಗುತಿದ್ದ ಭೂಮಿಯನ್ನು ಮೇಲ್ವರ್ಗದವರು ಕಿತ್ತುಕೊಂಡು

ದಲಿತರನ್ನು ಗುಲಾಮರಂತೆ ದುಡಿಸಿಕೊಳ್ಳುವವರ ವಿರುದ್ಧ ಕಾನೂನು ಸಮರ ಸಾರಿದರು.

9. 1941 ಆಗಸ್ಟ ಮಹರ್ ಜನಾಂಗ ಸೇರಿದಂತೆ ಅಸ್ಪೃಶ್ಯರು ಆರಂಭಿಸಿದ ಕೃಷಿ ಆಧಾರಿತ ಉದ್ಯೋಗ, ಸಣ್ಣಮಟ್ಟ ವ್ಯಾಪಾರದ ಮೇಲೆ ವಿಧಿಸುತ್ತಿದ್ದ ತೆರಿಗೆಯನ್ನು ಕೈಬಿಡಬೇಕೆಂದು ಕಾನೂನಿನ ಹೋರಾಟ ನಡೆಸಿ ಜಯಪಡೆದರು.
10. 1944 ರಲ್ಲಿ ಪರಿಶಿಷ್ಟ ಜಾತಿಗಳ ಅಭಿವೃದ್ಧಿಗೆ ಟ್ರಸ್ಟಗಳ ರಚನೆ ಹಾಗೂ 1947 ರಲ್ಲಿ ಮುಂದುವರಿದು "ಭಾರತೀಯ ರೂಪಾಯಿಗಳ ಇತಿಹಾಸ, ಬ್ಯಾಂಕುಗಳ ಸಂಪುಟ-1" ಎಂಬ ವಿವರವಾದ ಪುಸ್ತಕ ರಚನೆ ಮಾಡಿದರು.
11. 1948 ನವೆಂಬರ್ 20 ರಲ್ಲಿ ಅನುಚ್ಛೇದ-17 ರಲ್ಲಿ ಅಸ್ಪೃಶ್ಯತಾ ನಿವಾರಣ ಕಾನೂನು ಜಾರಿಗೆ ತರಲು ಸಂವಿಧಾನದ ಸಮಿತಿ ಒಪ್ಪಗೆ ಪಡೆದರು.

ಹೀಗೆ ಅಂಬೇಡ್ಕರ್‌ವರು ಅರ್ಥಶಾಸ್ತ್ರದ ಕುರಿತಾಗಿ ಹಲವು ಮೌಲ್ವಿಕ ಕೃತಿಗಳನ್ನು ಬರೆಯುವುದರೊಂದಿಗೆ ಅನೇಕ ಗುರುತರವಾದ ಹೋರಾಟಗಳನ್ನು ನಡೆಸಿದ್ದಾರೆ. ಜೊತೆಗೆ ಕಾನೂನಿನ ಮಂತ್ರಿಯಾಗಿ ಅನುರೂಪವಾದ ನಿಯಮಗಳನ್ನು ರೂಪಿಸಿದ್ದಾರೆ. "ರೂಪಾಯಿಯ ಸವಾಲು-ಹುಟ್ಟು ಮತ್ತು ವಿಕಾಸ" ಎಂಬ ಗ್ರಂಥದಲ್ಲಿ ಅವರು ಭಾರತದ ಅರ್ಥಶಾಸ್ತ್ರದ ಜನಕ ಎಂದು ಕರೆಯಲ್ಪಡುವ ನ್ಯಾಯಮೂರ್ತಿ ಮಹಾದೇವ ಗೋವಿಂದ ರಾನಡೆ, ಭಾರತದ ಆರ್ಥಿಕ ಇತಿಹಾಸದ ಲೇಖಕ ರಮೇಶಚಂದ್ರ ದತ್ತ, ಜಾನ್ ಸ್ಟುವರ್ಡ ಮಿಲ್, ಮೇಜರ್ ವಿಂಗೇಟ್ ಅವರಂತ ವಿದ್ವಾಂಸರ ವಿಚಾರದ ಬಗ್ಗೆ ಸಂಶೋಧನೆ ಮಾಡಿ ಅದಕ್ಕೆ ತಮ್ಮ ಬಿನ್ನಾಭಿಪ್ರಾಯಗಳನ್ನು ನಿರಾಳವಾಗಿ ಈ ಪುಸ್ತಕದಲ್ಲಿ ಬರೆದಿದ್ದಾರೆ. ಅಧ್ಯಯನದ ಸಂದರ್ಭದಲ್ಲಿ ಡಾ. ಅಂಬೇಡ್ಕರ್‌ರಿಗೆ ಮಾರ್ಗದರ್ಶಕರಾಗಿದ್ದ ಹಾಗೂ ಅವರ ಗುರುಗಳೂ ಆದ ಎಡ್ವಿನ್ ಕೆನನ್‌ರವರು "ರೂಪಾಯಿಯ ಸವಾಲು-ಹುಟ್ಟು ಮತ್ತು ವಿಕಾಸ" ಎಂಬ ಗ್ರಂಥಕ್ಕೆ ತಮ್ಮ ಮುನ್ನುಡಿಯನ್ನು ಬರೆಯುತ್ತ ಹೀಗೆ ಹೇಳುತ್ತಾರೆ "ಅಂಬೇಡ್ಕರ್‌ರ ನಿಷ್ಕರ್ಷೆಗಳ ಜೊತೆ ತಮ್ಮ ಸ್ವಂತದ ಭಿನ್ನಾಭಿಪ್ರಾಯಗಳು ಏನೇ ಇದ್ದರೂ ತನ್ನ ವಿದ್ಯಾರ್ಥಿಯ ವಿಚಾರಗಳು ತನ್ನನ್ನು ಅನಿವಾರ್ಯವಾಗಿ ಮರುಚಿಂತನೆಗೆ ಪ್ರಚೋಧಿಸಿವೆ" ಎಂದು ಬರೆಯುತ್ತಾರೆ. ಅಲ್ಲಿಗೆ ಅಂಬೇಡ್ಕರ್‌ರ ವಿಚಾರಗಳು ಚಿಂತನೆಗಳು ಎಂತಹ ಉನ್ನತ ಮಟ್ಟದಲ್ಲಿತ್ತು ಎಂಬುದಕ್ಕೆ ಈ ಮಾತೆ ಸಾಕು.

ಡಾ. ಅಂಬೇಡ್ಕರ್ ಅವರಿಗೆ ಅನೇಕ ವಿಶ್ವವಿದ್ಯಾಲಯದಲ್ಲಿ, ಕಾಲೇಜಿನಲ್ಲಿ ಅರ್ಥಶಾಸ್ತ್ರದ ವಿಭಾಗದಲ್ಲಿ ಉನ್ನತ ಹುದ್ದೆಗಳು ದೊರಕಿವೆ. ಜೊತೆಗೆ ವಿಶ್ವದ ಎಲ್ಲ ವಿಶ್ವವಿದ್ಯಾಲಯಗಳು ಅವರಿಗೆ ಗೌರವ ಪದವಿಗಳನ್ನು ನೀಡಿ ಗೌರವಿಸಿವೆ. ಈ ಮೂಲಕ ಅರ್ಥಶಾಸ್ತ್ರದಲ್ಲಿ ಅತ್ಯುನ್ನತ ಪದವಿ ಗಳಿಸಿದ ಮೊದಲ ಶ್ರೇಣಿಯ ನಾಯಕ ಎಂಬ ಹೆಗ್ಗಳಿಕೆ ಇವರ ಹೆಸರಿನಲ್ಲಿದೆ. ಆದರೂ ಅಧಿಕಾರ ಬಂದಾಗ ಬೀಗದೆ, ಅಧಿಕಾವಿಲ್ಲದೆ ಹೋದಾಗ ಕೊರಗದೆ ಶೋಷಿತವರ್ಗದ ಹಿತಕ್ಕಾಗಿ ತನ್ನ ಸ್ವ ಹಿತವನ್ನು

ಬದಿಗೊತ್ತಿ ಸಮಾಜಕ್ಕಾಗಿ ತನ್ನೆಲ್ಲ ಕರ್ತೃತ್ವ ಬುದ್ದಿ, ಪ್ರತಿಭೆಯನ್ನು ಧಾರೆ ಎರೆದವರು. ಆದರೆ 'ಮೇಲ್ಪಂಕ್ತಿಯ ವರ್ಗ, ತಮ್ಮ ಅಧಿಕಾರದ ಬಲದಿಂದ ಅವರ ವಿಚಾರಧಾರೆಗಳನ್ನು ಅಲಕ್ಷಿಸಿ ಸಮಾಜಕ್ಕೂ, ಅವರಿಗೂ ಅನ್ಯಾಯವೆಸಗಿದರು'. ಇದು ಒಂದು ದುರಂತವಾದರೆ, 'ಅಂಬೇಡ್ಕರ್‌ರ ವಿಚಾರಗಳಿಂದ ಹಾಗೂ ಅವರು ಒದಗಿಸಿ ಮೀಸಲಾತಿಯ ಉಪಯುಕ್ತತೆ ಪಡೆದ ಯಾವೋಬ್ಬ ದಲಿತ ನಾಯಕರೂ ಅವರ ಆರ್ಥಿಕ ವಿಚಾರಗಳನ್ನು ಪ್ರಚಾರಗೊಳಿಸುವ, ಅನುಷ್ಟಾನಕ್ಕೆ ತರುವ ಕಾರ್ಯ ಮಾಡದೇ ಉಳಿದದ್ದು ಎರಡನೇ ದುರಂತವೇ ಸರಿ. 'ಇಷ್ಟಾದರೂ ನಾವು ಇಂದಿಗೂ ಆರಕ್ಕೆ ಏರದ ಮೂರಕ್ಕೆ ಇಳಿಯದ ಪಾಶ್ಚಿಮಾತ್ಯರ ಅರ್ಥವ್ಯವಸ್ಥೆಯನ್ನೇ ಅವಲಂಬಿಸಿದ್ದು ಮೂರನೆ ದುರಂತ.

ಒಟ್ಟಿನಲ್ಲಿ ಈ ಎಲ್ಲ ವಿಚಾರದ ಆರ್ಥಿಕ ಚಿಂತನೆಗಳನ್ನು ಅವಲೋಕಿಸಿದಾಗ ನಮಗೆ ಇತಿಹಾಸದಲ್ಲಿ ಎಲ್ಲಿಯೂ ಅಂಬೇಡ್ಕರ್ ಓರ್ವ ಆರ್ಥಿಕ ತಜ್ಞನಾಗಿದ್ದರು ಎಂದು ಉಲ್ಲೇಖಿಸಿದ ಉದಾಹರಣೆಗಳೆ ಇಲ್ಲ. “ಭಾರತೀಯರಾಗಿ ಅವರ ಆರ್ಥಿಕ ವಿಚಾರಗಳನ್ನು ನಾವೇ ತಿಳಿಯದೆ ನಿರಾಸಕ್ತಿ ವಹಿಸಿರುವಾಗ ವಿದೇಶಿಯರು ಅದನ್ನು ಉಪೇಕ್ಷೆ ಮಾಡಿರುವುದರಲ್ಲಿ ಯಾವ ತಪ್ಪುಗಳೂ ಇಲ್ಲ” ಎನ್ನುವ ಮಾತು ಅವರ ಪಾಲಿಗೆ ಅಕ್ಷರಶಹ ಸತ್ಯವಾಗಿದೆ.

**ಸಾಮಾಜಿಕ ನೆಲೆಯಲ್ಲಿ ಆರ್ಥಿಕ ಸ್ವಾವಲಂಬನೆಗಾಗಿ ನಡೆಸಿದ ಚಿಂತನೆಗಳು:**

“ಅಸ್ಪೃಶ್ಯೋನ್ನತಿ ಚಾ ಆರ್ಥಿಕ ಪಾಯಾ” ಎಂಬ ಶಿರೋನಾಮೆಯ ಒಂದು ಸಂಪಾದಕೀಯ ಬರೆಹದಲ್ಲಿ ಅವರು “ಅಸ್ಪೃಶ್ಯರು ಆರ್ಥಿಕವಾಗಿ ಸ್ವಾವಲಂಬಿಗಳಾಗುವುದು ಹೇಗೆ? ಎಂಬುದರ ಕುರಿತು ಹೇಳಿದ್ದಾರೆ. ನಿಮ್ಮ ಆರ್ಥಿಕ ಪರಾವಲಂಬಿತನವನ್ನು ಬಳಸಿಕೊಂಡು ಸವರ್ಣೀಯರು ಅಸ್ಪೃಶ್ಯತೆಯ ಸಂಕಲೆ ನಿಮ್ಮ ಕಾಲುಗಳನ್ನು ಸದಾ ಕಟ್ಟಿರುವಂತೆ ಮಾಡಲು ಪ್ರಯತ್ನಿಸುತ್ತಿದ್ದಾರೆ. ಅದಕ್ಕಾಗಿ ಕೃಷಿ, ನೇಕಾರಿಕೆ, ಬಟ್ಟೆಗಿರಣಿ, ವ್ಯಾಪಾರ ಇತ್ಯಾದಿ ಉತ್ಪನ್ನದಾಯಕ ಕೆಲಸಗಳನ್ನು ನಡೆಸುತ್ತಾ ನೀವು ಸ್ವಾವಲಂಬಿಗಳಾಗಬೇಕು” ಎಂದಿದ್ದಾರೆ. ಇದಕ್ಕೆ ಪೂರಕವಾಗಿ ಕೆಲವು ಸಲಹೆಗಳನ್ನು ನೀಡುತ್ತಾರೆ, ಅವುಗಳೆಂದರೆ.

1. ಹರಿಜನರೆಲ್ಲರು ಕೃಷಿಯನ್ನು ಹಾಗೂ ಕೃಷಿ ಆಧಾರಿತವಾದ ಎಲ್ಲ ರೀತಿಯ ಉದ್ಯೋಗದಲ್ಲಿ ತೊಡಗಬೇಕು.
2. ಬಂಡವಾಳ, ಅನುಭವದ ಕೊರತೆಯಿಂದ ಉತ್ತಮ ಲಾಭದಾಯಕ ಉದ್ಯೋಗ ಮಾಡಲು ಸಾಧ್ಯವಿಲ್ಲ ಎಂಬ ಮೇಲ್ವರ್ಗದವರ ಮಾತನ್ನು ಮೀರಿ ಬೆಳೆಯಬೇಕಾದರೆ 'ಖಾದಿ'ತಯಾರಿ ಮಾಡುವ ಕೆಲಸದಿಂದ ನೀವು ಸಂಪತ್ತು ಗಳಿಸಿಕೊಳ್ಳಬಹುದು ಎಂದು ತಿಳಿಸಿದರು.
3. “ಶಿಕ್ಷಣ ಪ್ರತಿಯೊಬ್ಬರಿಗೂ ದೊರೆಯಬೇಕು ಉಚ್ಚ, ಕೆಳದರ್ಜೆಯ ಪ್ರತಿಯೊರ್ವನಿಗೂ ಅದು

ಅತಿ ಕಡಿಮೆ ಖರ್ಚಿನಲ್ಲಿ ಪಡೆಯುವ ವ್ಯವಸ್ಥೆಯಾಗಿದ್ದು ಅದು ಸರ್ಕಾರಿ ವಲಯದ ಪ್ರೋತ್ಸಾಹಕಾರಕವಾಗಿ ನಿರ್ವಹಣೆಯಲ್ಲಿ ಜಾರಿಯಾಗಬೇಕು" ಎಂಬ ಅಭಿಪ್ರಾಯವನ್ನು "ಚಾವ್ದರ್" ಕೆರೆ ನೀರು ಬಳಕೆಯ ಕಾನೂನಿನ ವಿಜಯೋತ್ಸವದ ಕಾಲಕ್ಕೆ ಅಂದರೆ 1927 ಡಿಸೆಂಬರ 26 ರಂದು ಸಾರ್ವಜನಿಕರನ್ನು ಉದ್ದೇಶಿಸಿ ತಮ್ಮ ಮನದಿಂಗಿತವನ್ನು ವ್ಯಕ್ತಪಡಿಸುತ್ತಾರೆ.

4. ನಿಮ್ನವರ್ಗದವರು ಹಿಂದೂಗಳು ಹಿಂದೂ ಸಂಸ್ಕಾರ, ಹಿಂದೂ ಕಾನೂನಿಗೆ ಬದ್ಧರಾದವರು, ಸಾಮಾಜಿಕವಾಗಿ ಹಿಂದೂಗಳೆಲ್ಲರೂ ಏಕರೂಪ ಹಬ್ಬಗಳನ್ನು ಆಚರಿಸುತ್ತಾರೆ, ಆದರೂ ಸಾಮಾಜಿಕ ಬಂಧುತ್ವದಿಂದ ಹೊರತಾಗಿ ದಾಸ್ಯ ಪ್ರವೃತ್ತಿಯಲ್ಲಿ ಜೀವಿಸುತ್ತಾರೆ. ಇದರಿಂದ ಹೊರಬರಬೇಕಾದರೆ ಶಿಕ್ಷಣದ ಸಾರ್ವತ್ರೀಕರಣ ಒಂದೇ ಸೂರಿನಡಿ ದೊರಕಬೇಕು. ಬಡವ ಶ್ರೀಮಂತರೆನ್ನದೆ ಏಕರೂಪದಲ್ಲಿ ಅದು ಜಾರಿಗೆ ಬರಬೇಕು ಎಂದು ಕರೆನೀಡುತ್ತಾರೆ. ಇದಕ್ಕೆ ಪೂರಕವಾಗಿ ವಿದ್ಯಾರ್ಥಿವೇತನ, ಸೇರಿದಂತೆ ವಸತಿನಿಲಯಗಳ ಸ್ಥಾಪನೆ, ರೈಲ್ವೆ ವಿಭಾಗದಲ್ಲಿ ತಾಂತ್ರಿಕ ತರಬೇತಿ, ಬಟ್ಟೆಗಿರಣಿಗಳ ಸ್ಥಾಪನೆ, ನಿರ್ವಹಣೆ ಇನ್ನಿತರ ವೃತ್ತಿಪರ ವಿದ್ಯಾಸಂಸ್ಥೆಗಳನ್ನು ಸಕಾರದ ಧನಸಹಾಯದಡಿ ಸ್ಥಾಪಿಸುವಂತೆ ಸಲಹೆ ನೀಡುತ್ತಾರೆ.
5. ಗಿರಣಿಯಲ್ಲಿ ಕಾರ್ಮಿಕರಿಗೆ ವಸತಿ ಸೌಲಭ್ಯದ ವ್ಯವಸ್ಥೆ ಹಾಗೂ ಅವರ ಮಕ್ಕಳಿಗೆ ಅದೇ ಜಾಗದಲ್ಲಿ ಶಿಕ್ಷಣದ ಅನುಕೂಲತೆಯೂ ದೊರಕಬೇಕು.
6. ವೇತನ, ಭತ್ಯೆಗಳು ಜೀವನ ವೆಚ್ಚಗಳ ಆಧಾರದಲ್ಲಿ ಮತ್ತು ಶ್ರಮದ ಮಟ್ಟವನ್ನು ಅನುಸರಿಸಿ ನಿರ್ಣಯವಾಗಬೇಕು ಜೊತೆಗೆ ಅದು ಕಾಲಕಾಲಕ್ಕೆ ತಕ್ಕಂತೆ ಬದಲಾಗಬೇಕು ಎಂದು ಆಶಿಸುತ್ತಾರೆ.
7. ತಾಂತ್ರಿಕ ಶಿಕ್ಷಣದಲ್ಲಿ, ಆಡಳಿತದ ವಿವಿಧ ಇಲಾಖೆಗಳಲ್ಲಿ ಇರುವ ಉನ್ನತ ಹುದ್ದೆಗಳಲ್ಲಿ ಕೆಲವೊಂದನ್ನ ಸಾಮಾಜಿಕವಾಗಿ ಹಿಂದುಳಿದ ಹಾಗೂ ದಲಿತ ಸಮುದಾಯದವರಿಗೆ ಮೀಸಲಾಗಿಡಬೇಕು. ಈ ಆಶಯವನ್ನು ಮುಂದೆ ಸಂವಿಧಾನದ ರಚನಾ ಕಾಲಕ್ಕೆ ಅಗತ್ಯ ಅನುಸೂಚಿಗಳನ್ನು ರೂಪಿಸಿ ನಿಮ್ನವರ್ಗದವರ ಆರ್ಥಿಕ ವ್ಯವಸ್ಥೆ ಸುಧಾರಿಸಲು ಅನುವು ಮಾಡಿಕೊಟ್ಟರು.

ಮೀಸಲಾತಿ ನೀಡಿಕೆ ಬಗ್ಗೆ ಅಧಿಕಾರಿಯೋರ್ವರು ಇವರನ್ನು "ಉದ್ಯೋಗವನ್ನು ಹುಡುಕುವುದೇ ನಿಮ್ಮ ರಾಜಕೀಯವೇ" ಎಂದು ಪ್ರಶ್ನಿಸಿದಾಗ ಅದಕ್ಕೆ ಅವರು ಹೀಗೆ ಉತ್ತರಿಸುತ್ತಾರೆ "ಶೇಕಡ 90% ಉದ್ಯೋಗಗಳನ್ನು ನೀವೇ ಹಿಡಿದಿಟ್ಟುಕೊಂಡಿದ್ದೀರಾ ನಿಮಗೆ ಆ ಉದ್ಯೋಗಗಳು ಅಸಹ್ಯವಾಗಿದ್ದರೆ ಅದಕ್ಕೆ ಅಂಟಿಕೊಂಡಿರುವುದನ್ನು ಬಿಟ್ಟು ನಮಗೆ ಸ್ಥಳಮಾಡಿಕೊಡಿ" ಎನ್ನುತ್ತಾರೆ. ಇದರರ್ಥ ಶಿಕ್ಷಣ, ಉದ್ಯೋಗ, ಸಂಪತ್ತು ಕೆಲವೇ ಕೆಲವರ ಪಾಲಾಗಿರುವುದು, ಉಳಿದವರು ಜೀತ ಮಾಡಲು ಅಷ್ಟೇ ಎಂಬ ಭಾವನೆ ಅಳಿಯಬೇಕು ಎಂಬುದಾಗಿತ್ತು ಎಂದು ತಿಳಿದು ಬರುತ್ತದೆ.

**ಶೈಕ್ಷಣಿಕ ನೆಲೆಯಲ್ಲಿ ಆರ್ಥಿಕ ಸ್ವಾವಲಂಬನೆಗಾಗಿ ನಡೆಸಿದ ಚಿಂತನೆಗಳು:**

ಅಸ್ಪೃಶ್ಯರ ಗುಲಾಮತನವನ್ನು ಅಂಬೇಡ್ಕರ್‌ರು ಜಗತ್ತಿನ ಸರ್ವರೀತಿಯ ಗುಲಾಮತನದ ರಸಗಟ್ಟಿ ಎಂಬುದಾಗಿ ವ್ಯಾಖ್ಯಾನಿಸಿದ್ದಾರೆ. ದಲಿತರ ಅಸ್ಪೃಶ್ಯತನವನ್ನು

ನಿವಾರಿಸಲು ನಾಲ್ಕು ಆಯಾಮದ ಹೋರಾಟವನ್ನು ಹುಟ್ಟುಹಾಕುತ್ತಾರೆ. ಅವುಗಳಲ್ಲಿ ಪ್ರಧಾನವಾದದ್ದು "ಅಸ್ಪೃಶ್ಯರ ಆರ್ಥಿಕ ಸಮಸ್ಯೆಗಳು ಮತ್ತು ಅದರ ನಿವಾರಣೆಯಾಗಿತ್ತು". ಅದಕ್ಕಾಗಿ ಡಾ. ಅಂಬೇಡ್ಕರ್ ರವರು ಮಾಡಿದ ಪ್ರಯತ್ನಗಳು ಹಲವಾರುಗಳಿದ್ದರೂ ಅವುಗಳಲ್ಲಿ ಮುಖ್ಯವಾದ ಒಂದೆರಡು ವಿಚಾರಗಳು ಇಲ್ಲಿ ಬಿಚ್ಚಿಡಲಾಗಿದೆ.

1. ಅಸ್ಪೃಶ್ಯತೆಯ ಕಾರಣದಿಂದ ಬಂಡವಾಳದ ಮಾರುಕಟ್ಟೆಯಲ್ಲಿ ಈ ಸಮೂದಾಯದವರ ಶ್ರಮ, ಶಕ್ತಿ, ಕೇವಲ ಜೀತದಾಳುತನಕ್ಕೆ ಮೀಸಲಾಗಿ ಹಣ, ಹಣದ ಉತ್ಪದನೆ ಮಾಡಲು ಅವಕಾಶವಿರುವ ಎಲ್ಲಾ ಉದ್ಯೋಗಗಳು ಅಸ್ಪೃಶ್ಯರ ಪಾಲಿಗೆ ಮುಚ್ಚಲ್ಪಟ್ಟಿವೆ. ದಲಿತರು ಆಧುನಿಕ ಉದ್ಯಮಿಯಾಗಿ, ಪ್ರಧಾನ ಬಂಡವಾಳದಾರರಾಗಿ ಇನ್ನಿತರ ಕಾರ್ಮಿಕರಂತೆ ಸಮಾನತೆ ಪಡೆವ ಹಕ್ಕು ಸಿಗಬೇಕು ಎಂದು ಈ ನೆಲೆಯಲ್ಲಿ ಹೋರಾಟವನ್ನು ಆರಂಭಿಸಿದರು.
2. ದಲಿತರ ಅಸ್ಪೃಶ್ಯತಾ ನಿವಾರಣೆ ಎಂಬುದು ಸಂವಿಧಾನಾತ್ಮಕ ಕಾನೂನಿನಿಂದ ಸಾಧ್ಯವಿಲ್ಲ, ಅದು ವ್ಯಕ್ತಿ ಬೆಳೆಸಿಕೊಳ್ಳುವ ಆತನ ಮನಸ್ಥಿತಿಯನ್ನು ಅವಲಂಭಿಸಿದೆ. ಹಾಗಾಗಿ "ಮನಸುಗಳು ಬದಲಾದರೆ ಮನಸ್ಥಿತಿಗಳು ಕೂಡ ಬದಲಾಗುತ್ತದೆ" ಈ ಮನಸುಗಳಿಗೆ ಸೂಕ್ತ ಮೌಲ್ವಿಕ ಶಿಕ್ಷಣ ದೊರಕಬೇಕು ಮತ್ತು ಉತ್ತಮ ಸಾಮಾಜಿಕ ಚಿಂತನೆಯನ್ನು ಪ್ರತಿಯೋರ್ವ ನಾಗರಿಕನೂ ಬೆಳೆಸಿಕೊಳ್ಳುವ ವಾತಾವರಣ ಸೃಷ್ಠಿಯಾಗಬೇಕು ಎಂದು ಹಂಬಲಿಸಿದರು. ಬದಲಾಗಿ ಅಸ್ಪೃಶ್ಯರ ಪಾಲಿಗೆ ಯಾವುದೇ ಸಂವಿಧಾನಾತ್ಮಕ ಕಾನೂನು ಜಾರಿಗೆ ಬಂದರೂ ಅವರ ಜೀವನ ಶೈಲಿಯಲ್ಲಿ ಆಗಲಿ, ಸಾಮಾಜಿಕ ರಂಗದಲ್ಲೇ ಆಗಲಿ, ಬದಲಾವಣೆ ಕಾಣಲು ಸಾಧ್ಯವಿಲ್ಲ. ಇದಕ್ಕಾಗಿ ದಲಿತರು ತಮ್ಮ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಏಳ್ಗೆಯನ್ನು ತಾನೇ ಸಾಧಿಸಿಕೊಳ್ಳುವಂತ ವ್ಯವಸ್ಥೆ, ಸಂಘಟನೆ, ಯೋಜನೆಗಳನ್ನು ರೂಪಿಸಿಕೊಂಡು ಅದೇ ತಮ್ಮ ಪಾಲಿನ ಕರ್ತವ್ಯವೆಂದು ಭಾವಿಸಿ ಬಾಳಬೇಕು ಎಂದು ಸಾರಿದರು.
3. ಸಮ ಸಮಾಜದ ಕಲ್ಪನೆ ಕುರಿತು ಮಾತನಾಡುವಾಗೆಲ್ಲ ಅವರು ತಮ್ಮವರಿಗೆ ಒಂದು ಕಿವಿಮಾತು ಹೇಳಿದ್ದಾರೆ "ಮೇಲ್ವರ್ಗದವರ ಜೊತೆಯಲ್ಲಿ ಸಮಾನ ಸ್ತರದ ವ್ಯವಹಾರಕ್ಕಾಗಿ ನೀವು ಮೀಸಲಾತಿ ಬೇಕೆಂದು ಆಗ್ರಹಿಸಬೇಡಿ ಹಾಗೆ ಬೇಡಿಕೆಯನಿಟ್ಟು ಸವರ್ಣಿಯರ ಎತ್ತರಕ್ಕೆ ನೀವು ಏರಿದರೆ ಅವರಿಗೆ ತಮ್ಮ ಮಾನಹಾನಿಯಾಯ್ತು ಎಂಬ ಭ್ರಮೆ ಹುಟ್ಟಿ ಅದರಿಂದ ಜಗಳವುಂಟಾಗಿ ಅದು ವರ್ಗಸಂಘರ್ಷಕ್ಕೆ ತಿರುಗಿ ತಿಕ್ಕಾಟಗಳು ಉಂಟಾಗುತ್ತದೆ. ಆದಕಾರಣ ಅಸ್ಪೃಶ್ಯರು ಆರ್ಥಿಕ ಸ್ವಾವಲಂಬನೆ ಬಗ್ಗೆ ಯೋಚಿಸುವಾಗೆಲ್ಲ ತಮ್ಮ ವ್ಯಕ್ತಿತ್ವ ರೀತಿ–ನೀತಿಗಳು ಜೀವನಕ್ರಮ ಹಾಗೂ ನಮ್ಮ ಚಿಂತನೆಗಳು ಕೂಡ ಬಹುಮುಖ್ಯವಾಗಿರುತ್ತವೆ ಎಂಬುದರ ಅರಿವು ಮಾಡಿಸುತ್ತಾರೆ.

**ನೈತಿಕ ನೆಲೆಯಲ್ಲಿ ಆರ್ಥಿಕ ಸ್ವಾವಲಂಬನೆಗಾಗಿ ನಡೆಸಿದ ಚಿಂತನೆಗಳು:**

"ಸ್ವ–ಸುಧಾರಣೆಗಳು, ಸ್ವ–ಏಳ್ಗೆ, ಸ್ವಾವಲಂಬನೆ, ಸ್ವ–ನಂಬಿಕೆ" ಈ ನಾಲ್ಕು ಮಂತ್ರಗಳು ದಲಿತರ ಪಾಲಿನ ಸರ್ವಾಂಗೀಣ ಏಳ್ಗೆಯ ಬೀಜಮಂತ್ರಗಳಾಗಬೇಕು. ಆಗ ಮಾತ್ರ ಸಾಮಾಜಿಕ ಅಸಮಾನತೆ, ಅಸ್ಪೃಶ್ಯತೆಯಂತ ಅನಿಷ್ಟ ಪದ್ಧತಿ

ನಿವಾರಣೆಯಾಗಲು ಸಾಧ್ಯ ಎಂದು ಕರೆ ಕೊಟ್ಟರು. ಅವರ ಸಾಮಾಜಿಕ ಜೀವನದ ಪರಿಸ್ಥಿತಿಗಳು ಸುಧಾರಿಸಲು ಯಾವುದೇ ಮುಲಾಜಿಗೆ ಒಳಪಡದೆ, ವಿರೋಧಗಳಿಗೆ ಅಂಜದೆ ಎಂತಹದ್ದೇ ಪರಿಸ್ಥಿತಿ ಬಂದರೂ ಎದುರಿಸಿ ಅವಶ್ಯಕತೆಗಳನ್ನು ಪೂರೈಸುವ ಸರ್ಕಾರ ನಮಗೆ ಬೇಕಾಗಿದೆ ಎಂದು ಬಿಚ್ಚುಮನದಿಂದ ಸಾರಿಸಾರಿ ಹೇಳಿದರು.

ಗಾಂಧೀಜೀ ಹಾಗೂ ಅಂಬೇಡ್ಕರ್ ಅವರ ಮೊದಲ ಸಮಾಗಮದಲ್ಲಿ ನಡೆದ ಒಂದು ಸಂಭಾಷಣೆಯಲ್ಲಿ ಬಾಪೂಜಿಯವರು ಹರಿಜನರ ಅಭಿವೃದ್ಧಿಗೆ ತಾವು ಕೂಡ ನಿಮ್ಮಂತೆ ಶ್ರಮವಹಿಸಿ ದುಡಿಯುತ್ತಿದ್ದು ಅಸ್ಪೃಶ್ಯರ ಉದ್ದಾರಕ್ಕಾಗಿ ಇಪ್ಪತ್ತು ಲಕ್ಷ ಹಣವನ್ನು ನಿಧಿಯ ರೂಪದಲ್ಲಿ ಇಡುವಂತೆ ಕಾಂಗ್ರೆಸಿಗೆ ಒತ್ತಾಯ ಮಾಡಿದ್ದೇನೆ ಎಂದು ಹೆಮ್ಮೆಯಿಂದ ತಿಳಿಸಿದರು. ಅದಕ್ಕೆ ಅಂಬೇಡ್ಕರ್ ಅವರು ಹೀಗೆ ಉತ್ತರಿಸುತ್ತಾರೆ "ತಾವು ಇಟ್ಟ ಇಪ್ಪತ್ತು ಲಕ್ಷ ಹಣ ವ್ಯರ್ಥವಾಗಿದೆ ಅಷ್ಟೊಂದು ಮೊತ್ತದ ಹಣ ನನ್ನ ಇಷ್ಟು ದೊಡ್ಡ ಮಂದಿಯ (ಜನರ) ಆರ್ಥಿಕ ಸುಧಾರಣೆಯಲ್ಲಿ ಯಾವುದೇ ಮಹತ್ತರವಾದ ಬೆರಗು ಹುಟ್ಟುಸುವ, ಬದಲಾವಣೆ ತರಲಾರದು"ಎನ್ನುತ್ತಾರೆ ಇದರ ಬದಲಾಗಿ ಅಸ್ಪೃಶ್ಯತೆಯ ನಿವಾರಣೆಯೊಂದಿಗೆ ದಲಿತರು ಆರ್ಥಿಕವಾಗಿ ಸ್ವಾವಲಂಬಿಗಲಾಗಬೇಕಾದರೆ ಕಾಂಗ್ರೆಸ್ ಹಾಗೂ ಅದರ ಅನುಯಾಯಿಗಳು ಮಾಡಬಹುದಾದ ಕಾರ್ಯಗಳೇನು ಎಂಬ ಕೆಲವು ಸಲಹೆಗಳನ್ನು ನೀಡಿದರು. ಅವುಗಳೆಂದರೆ:

1. ಕಾಂಗ್ರೆಸ್ ನ ಪ್ರತಿಯೋರ್ವ ಸದಸ್ಯನೂ ಕಡ್ಡಾಯಾವಾಗಿ ಅಸ್ಪೃಶ್ಯರ ನಿವಾರಣೆಯ ಆಂದೋಲನದಲ್ಲಿ ಭಾಗವಹಿಬೇಕು. (ಅಂದಿಗೆ ಕಾಂಗ್ರೇಸ ಇಂದಿನ ಹಾಗೆ ಒಂದು ಪಕ್ಷವಾಗಿರಲಿಲ್ಲ ಅದೊಂದು ಹೋರಾಟದ ಸಂಘಟನೆಯಾಗಿತ್ತು )
2. ಪ್ರತಿಯೋರ್ವ ಕಾಂಗ್ರೇಸನ ಸದಸ್ಯರು ತಮ್ಮ ಕಛೇರಿ, ಮನೆಗಳಲ್ಲಿ ಒಳ-ಹೊರ ಎಲ್ಲ ಕೆಲಸಕ್ಕೆ ಒಬ್ಬ ದಲಿತನನ್ನು ಕೆಲಸಕ್ಕೆ ನೇಮಿಸಿಕೊಂಡರೆ ಮಾತ್ರ ಆತನಿಗೆ ಸದಸ್ಯತ್ವ ಖಾಯಂ ಎಂದಾಗಬೇಕು.
3. ಪ್ರತಿಯೋರ್ವ ಕಾಂಗ್ರೇಸ್‌ನ ಸದಸ್ಯರು ಒರ್ವ ಅಸ್ಪೃಶ್ಯ, ದಲಿತರ ವಿದ್ಯಾರ್ಥಿಯನ್ನು ಅವನು ಇಚ್ಚಿಸಿದವರೆಗೆ ಓದಲು ಅವಕಾಶವನ್ನು ತಮ್ಮ ಹಂತದಲ್ಲಿ ಪಾಲಿಸಿಕೊಂಡು ಬರುವ ನಿಯಮವಿರಬೇಕು.
4. ಪ್ರತಿಯೋರ್ವ ಕಾಂಗ್ರೇಸ್‌ನ ಮೇಲ್ಪಂಕ್ತಿಯ ಸದಸ್ಯರು ವಾರಕ್ಕೊಮ್ಮೆ ದಲಿತರ ಮನೆಯಲಿ ವಾಸಮಾಡಿ ಊಟ ಮಾಡಿದರೆ ಸದಸ್ಯತ್ವದ ನವೀಕರಣ ಎಂಬ ಕಟ್ಟುಪಾಡುಗಳು ಬರಬೇಕು

ಇದನ್ನು ಜಾರಿಗೆ ತರಲು ತಮ್ಮಿಂದ ಸಾಧ್ಯವೇ ಬಾಪೂಜಿ? ಎಂದು ಕೇಳುವ ಮೂಲಕ ಆರ್ಥಿಕ ಸ್ವಾವಲಂವನೆಗಾಗಿ ನೈತಿಕ ನೆಲೆಯಲ್ಲಿ ನೆರವನ್ನು, ಬೆಂಬಲ ಕೋರಿದರು. ಜಾತಿವ್ಯವಸ್ಥೆಯು ಉಚ್ಛ್ರಾಯ ಸ್ಥಿತಿಯಲಿದ್ದ ಕಾಲಘಟ್ಟವದು. ಹಾಗಾಗಿ ಮನುಸಿದ್ದಾಂತ ಆಳವಾಗಿ ಬೇರೂರಿದ್ದ ಕಾಲಪರ್ವದಲ್ಲಿ ಅದು ಅಸಾಧ್ಯವಾದರೂ

ಸಾಧಿಸಲು ಏನು ಮಾಡಲು ಆಗದೆ ಹೋದ ಮಾತುಗಳೇನು ಅವು ಆಗಿರಲಿಲ್ಲ.

**ಕಾನೂನು ನೆಲೆಯಲ್ಲಿ ಸ್ವಾವಲಂಬನೆಗಾಗಿ ನಡೆದ ಚಿಂತನೆಗಳು ಹಾಗೂ ಅದರ ಅನುಷ್ಠಾನಗಳು:**

ಡಾ. ಭೀಮಾರಾವ್ ಅಂಬೇಡ್ಕರ್ ಉನ್ನತ ವ್ಯಾಸಂಗಕ್ಕಾಗಿ ವಿದೇಶಗಳಲ್ಲಿ ಹೆಚ್ಚು ಸಮಯ ಕಳೆದವರು. ಅಲ್ಲಿ ಅವರಿಗಾದ ಒಂದು ಅನುಭವ ಎಂದರೆ "ವ್ಯಕ್ತಿಯೊಬ್ಬನ ಆರ್ಥಿಕ ಸ್ಥಿತಿಯ ಉನ್ನತಿಯೋಂದಿಗೆ ರಾಜಕೀಯವಾದ ಉನ್ನತಿ ಯಾವಾಗ ಪ್ರಾಪ್ತವಾಗುವುದೋ ಆಗ ಅವನಿಗೆ ಸಮಾಜದಲ್ಲಿ ತಾನೇ ತಾನಾಗಿ ಗೌರವ, ಮನ್ನಣೆಗಳೂ ದೊರಕುತ್ತವೆ"ಎಂಬ ಸತ್ಯದ ಅರಿವು ಅವರಿಗಾಗಿತ್ತು ಅದಕ್ಕಾಗಿ ಕಾನೂನು ಮತ್ತದರ ಅನುಷ್ಠಾನ ಪ್ರಭಲವಾಗಿದ್ದರೆ ಭವಿಷ್ಯದಲ್ಲಿ ಯಾರೂ ನಮ್ಮ ಹಕ್ಕುಗಳನ್ನು ಕಿತ್ತುಕೊಳ್ಳಲು, ನಮ್ಮನ್ನು ವಂಚಿಸಲು ಸಾಧ್ಯವಿಲ್ಲ ಎಂದು ತಿಳಿದು ಈ ರಂಗದಲ್ಲೂ ಚಿಂತನೆಗಳನ್ನು ಮಾಡಿದ್ದಾರೆ. ಅದರ ಕೆಲವು ಭಾಗಗಳ ಉಲ್ಲೇಖ ಮಾತ್ರ ಇಲ್ಲಿದೆ.

1. ಹರಿಜನ ವತನ ವಿಧೇಯಕ: ವಂಶ ಪರಂಪರೆಯಂತೆ ಕೃಷಿ ಮಾಡುವವರಿಗೆ ಸರ್ಕಾರದಿಂದ ಸಿಗುವ ಭೂಮಿಗೆ "ವತನ" ಎನ್ನುವರು. ಇದರಲ್ಲಿ ಉಂಟಾಗಿದ್ದ ಲೋಪಗಳನ್ನು ವಿಧಾನ ಮಂಡಲದಲಿ ಚರ್ಚೆಗೆ ತಂದು ಅನುಚ್ಛೇಧ-9ರ ಅಡಿಯಲ್ಲಿ ಜಮೀನನ್ನು ಮೂಲ ಮಾಲೀಕನಿಗೆ ಕೊಡಿಸುವ ಕಾರ್ಯದ ಅಧಿಕಾರವನ್ನು ಕಲೆಕ್ಟರಿಗೆ ವಹಿಸುವುದು. ಎಂಬ ಒಂದು ಹೊಸ ವಿಧಿಯನ್ನು ಸೇರಿಸಲಾಯಿತು.
2. ಬಲೂತಿ ವಸೂಲಿ ವಿಧೇಯಕ: ಪರಂಪರರಾಗತವಾಗಿ ಕೆಲವು ಮನೆತನಗಳು ಗ್ರಾಮ ಸೇವೆಯ ಹೆಸರಲ್ಲಿ 'ಬಲೂತಿ' ಎಂಬ ಒಂದು ಉದ್ಯೋಗವನ್ನು ಮಾಡಿಕೊಂಡು ಬರುತ್ತಿತ್ತು. ಅಂದರೆ ಬಡಿಗಿ, ಕಮ್ಮಾರ, ಹಮಾಲ, ಕುಂಬಾರ, ಚಮ್ಮಾರ, ಧೋಭಿ, ಕ್ಷೌರಿಕ, ಬ್ರಾಹ್ಮಣ, ಸ್ವರ್ಣಕಾರ, ಅರ್ಚಕ, ಹರಿಜನ ಎಂಬ ಬಾರಾ (ಬಾರಾ ಎಂದರೆ ಹಿಂದಿ ಭಾಷೆಯಲ್ಲಿ ಹನ್ನೊಂದು ಎಂದರ್ಥ) ಸಮುದಾಯಗಳಿಂದ "ಖೋತ" ಎಂಬ ತೆರಿಗೆ ವಸೂಲಿಕಾರರಿದ್ದರು ಇವರಿಂದ ಅಸ್ಪೃಶ್ಯರಿಗಾಗುತ್ತಿದ್ದ ಸಮಸ್ಯೆಗಳಿಗೆ ಅನುಚ್ಛೇದ-19 ಅಡಿಯಲ್ಲಿ ಸುಧಾರಿತ ಸಲಹೆಗಳನ್ನು ನೀಡಿ ಅವರಿಗೆ ಉದ್ಯೋಗವೂ ಮುಂದುವರಿದು ದಲಿತರಿಗೆ ಆರ್ಥಿಕವಾಗಿ ನಷ್ಟಗಳೂ ಆಗದಂತೆ ನೋಡಿಕೊಂಡರು.
3. ಕಾರ್ಮಿಕರ ಸಂಘಟನೆಗಳ ರಚನೆ: 1929ರ ಎಪ್ರಿಲ್ 26 ಕಾರ್ಮಿಕರ ಸಂಘಟನೆಯಲ್ಲಿ ಜಾತೀಯ ಆಯಾಮಗಳು ಕಾರ್ಮಿಕರ ಆರ್ಥಿಕ ಸಮಸ್ಯಗಳಿಗೆ ಕಾರಣವಾಗಿದೆ ಎಂಬ ಸ್ಪಷ್ಟತೆಯ ಪರಿಚಯವನ್ನು ಜಗತ್ತಿಗೆ ಮಾಡಿಸಿದರೂ ಜೊತೆಗೆ ಸಮಾನ ಮನಸ್ಕರು, ವಿಶಾಲ ಮನದವರು, ಉನ್ನತ ಆಲೋಜನೆ ಉಳ್ಳವರನ್ನು ಕಲೆಹಾಕಿ ಸಂಘಗಳನ್ನು ಹುಟ್ಟುಹಾಕಿದರೂ ಇದಕ್ಕೆ "ಬಹಿಷ್ಕೃತ ಹಿತಾಕಾರಿಣಿ ಸಭಾ" ಒಂದು ಉತ್ತಮ ನಿದರ್ಶನ.

4. ರಚನಾತ್ಮಕ ಪ್ರಯತ್ನಗಳು: 1942 ರಿಂದ 1946 ರ ವರೆಗೆ ವೈಸರಾಯ್ ಅವರ ಸಲಹಾಕಾರರಾಗಿ ತಮ್ಮೆಲ್ಲ ಕಾನೂನಿನ ಜ್ಞಾನವನ್ನು ಬಳಸಿ ಯಾರಿಗೂ ನೋವಾಗದ ಹಾಗೆ ಭವಿಷ್ಯದಲ್ಲಿ ಕೇಡಾಗದಂತ ಚಿಂತನೆಗಳನ್ನು ಹುಟ್ಟು ಹಾಕಿದರು.

ಕಾರ್ಮಿಕ-ಮಾಲೀಕರ ಹಿತದೃಷ್ಟಿಯಿಂದ ''ಚೀಫ ಕಮೀಷನ್ನರ್ ಕಛೇರಿ ಆರಂಭಿಸಿದರು. ಕೈಕಾರಿಕಾ ಕಾರ್ಮಿಕರಿಗಾಗಿ ಅನೇಕ ಸರ್ಕಾರಿ ಆದೇಶಗಳನ್ನು ಹೊರಡಿಸಿದರು. ಕಾರ್ಮಿಕ ಮಂತ್ರಿಯಾಗಿದ್ದ ಕಾಲದಲ್ಲಿ ತರಬೇತಿ ಹೊಂದಿದ ನುರಿತ ಕಾರ್ಮಿಕರು ಮಾಲೀಕ-ಕಾರ್ಮಿಕರ ಸಂಘರ್ಷದಲ್ಲಿ ಕೆಲಸವಿಲ್ಲದೆ ಬೀಡಿ ಸುತ್ತಿ ಜೀವನ ಸಾಗಿಸು ವಿಚಾರ ಕಂಡು ಅವರಿಗಾಗಿ ''ಉದ್ಯೋಗ ವಿನಿಮಯ ಕೇಂದ್ರ''ವನ್ನು ಸ್ಥಾಪಿಸಿ ಆರ್ಥಿಕ ನೆಲೆಗಳು ಅವರನ್ನ ಅರಸಿ ಹೋಗುವಂತೆ ಮಾಡಿದರು.

5. ಕಾರ್ಮಿಕ-ಮಾಲೀಕ-ಸರ್ಕಾರ ಎಂಬ ತ್ರಿಪಕ್ಷೀಯ ಕೂಟದ ರಚನೆಯಿಂದ ಎಲ್ಲರೂ ಆರ್ಥಿಕ ಸ್ವಾವಲಂಬನೆ ಹೊಂದಿ ರಾಷ್ಟ್ರದ ಅಭಿವೃದ್ಧಿಗಾಗಿ ಶ್ರಮಿಸಲು ಸಾಧ್ಯವೆಂದು ಮನವರಿಕೆ ಮಾಡಿದರು.

6. ಸಂವಿಧಾನಾತ್ಮಕ ಹಕ್ಕು: ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಹಕ್ಕು ಮೂಲಭೂತ ಹಕ್ಕಾಗಬೇಕು. ಅದು ಸಂವಿಧಾನಾತ್ಮಕ ಕಾನೂನಾಗಬೇಕು ಎಂದು ಆಗ್ರಹಿಸಿದರು. ಈ ಗುರಿ ಅಸಾಧ್ಯವೆಂದು ಅವರೇ ಹೇಳುತ್ತಾರೆ. ಆದ್ದರಿಂದ ತಮ್ಮ 'ಸ್ಟೇಟ್ಸ ಆಂಡ್ ಮೈನಾರಿಟೀಸ್ ಕ್ಲಾಸ 4ರಲ್ಲಿ' ರಾಜಕೀಯ ಸಮಾನತೆ ಜೊತೆಜೊತೆಯಲ್ಲಿ ಆರ್ಥಿಕ ಸಮಾನತೆ ತರುವ ಕಾಲಂ ರೂಪಿಸುತ್ತಾರೆ. ಅದರಲ್ಲಿ ಪ್ರಮುಖವಾದ ಏಳು ಅಂಶಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಅ) ಎಲ್ಲ ಶ್ರಮಿಕ ವರ್ಗಕ್ಕೂ ವಿಮೆ ಕಡ್ಡಾಯವಾಗಿದ್ದು ಅದರ ಒಡೆತನ ಸರ್ಕಾರದ ಹಿಡಿತದಲ್ಲಿರತ್ತಕ್ಕದ್ದು.

ಆ) ಕೃಷಿಯ ರಾಷ್ಟ್ರೀಕರಣವಾಗಿ ಅದನ್ನು ಸರ್ಕಾರವೇ ಸಂಪೂರ್ಣವಾಗಿ ವಹಿಸಿಕೊಳ್ಳಬೇಕು.

ಇ) ಖಾಸಗಿ ವ್ಯಕ್ತಿಗಳ ಬಳಿಯಿರುವ ಜಮೀನನ್ನು ಮುಟ್ಟುಗೋಲು ಹಾಕಿಕೊಂಡು ಅದಕ್ಕೆ ಪರಿಹಾರ ರೂಪದಲ್ಲಿ ಅವರಿಗೆ ಹಣ ಪಾವತಿ ಮಾಡುವುದಾಗಿ ನೀಡುವ ಪ್ರಮಾಣಪತ್ರ ನೀಡಬೇಕು. (ಡಿಬೆಂಚರ್ ರೂಪ)

ಈ) ಎಲ್ಲ ಕೃಷಿ ಭೂಮಿಯನ್ನು ಸರ್ಕಾರವೇ ವಶಕ್ಕೆ ಪಡೆದು ಹಳ್ಳಿಯ ರೈತರಿಗೆ ಗೇಣಿಮಾಡಲು ಕೊಡಬೇಕು.

ಉ) ಹೀಗೆ ಕೃಷಿಭೂಮಿ ಹಂಚುವಾಗ ಜಾತಿ, ಮತ, ಭೇಧವಿಲ್ಲದೆ ಭೂಹೀನರಿಗೆ ಮಾತ್ರ ಹಂಚಬೇಕು.

ಊ) ಕೃಷಿಗೆ ಬೇಕಾದ ಸಕಲ ಸಲಕರಣೆಗಳನ್ನು ನೇರವಾಗಿ ಸರ್ಕಾರವೆ ಸಹಾಯ ರೂಪದಲ್ಲಿ ನೀಡಬೇಕು.

ಋ) ಅನುಚ್ಛೇದ-39/ಸಿ ಪ್ರಭುತ್ವದ ಆರ್ಥಿಕ ನೀತಿಗಳು, ಸಂಪನ್ಮೂಲಗಳು ಒಂದು ಕಡೆ ಕೇಂದ್ರಿಕೃತವಾಗದಂತೆ ನೋಡಿಕೊಳ್ಳಬೇಕು ಎಂದು ಹೇಳುತ್ತದೆ.

ಎ) ಅನುಚ್ಛೇದ-41 ಪ್ರಭುತ್ವವು ಎಲ್ಲರಿಗೂ ದುಡಿಯುವ ಹಕ್ಕು, ದುರ್ಬಲರಿಗೆ, ವೃದ್ಧರಿಗೆ

ಸರ್ಕಾರದ ವತಿಯಿಂದ ಆರ್ಥಿಕ ಸಹಾಯಗಳು ದೊರಕಬೇಕು. ಜೊತೆಗೆ ಶಿಕ್ಷಣವು ಮೂಲಭೂತ ಹಕ್ಕಾಗಿ ಸಿಗಬೇಕು ಎಂದು ಆರ್ಥಿಕ ಸಾಮರ್ಥ್ಯಕ್ಕೆ ಈ ಷರತ್ತನ್ನು ಹಾಕಿದರು.

ಏ) ಅನುಚ್ಛೇದ–43 ಎಲ್ಲ ದುಡಿಯುವ ವರ್ಗಗಳಿಗೂ ಜೀವಿಸಲು ಸಾಧ್ಯವಾಗುವಷ್ಟು ವೇತನವನ್ನು ಕೊಡುವುದು. ಇಲ್ಲಿ ಪುರುಷ, ಸ್ತ್ರೀ ಸಮಾನರು, ಸಮಾನ ಕೆಲಸಕ್ಕೆ ಸಮಾನ ವೇತನ ಒದಗಿಸುವ ವಿಚಾರ ದಾಖಲಿಸಿದರು.

ಐ) ಅನುಚ್ಛೇದ–46ರ ಅಡಿಯಲ್ಲಿ "ದಲಿತ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಪುರೋಭಿವೃದ್ಧಿಗಾಗಿ" ಕಾಲಕಾಲಕ್ಕೆ ಅಗತ್ಯವಾದ ನೀತಿ ಮಾಡಬೇಕೆಂದು ಮಾರ್ಗದರ್ಶನ ಮಾಡಿದರು.

ಹೀಗೆ ಅವರು ಮಾಡಿದ ಈ ಮೇಲಿನ ಎಲ್ಲ ಮಾರ್ಗದರ್ಶನಗಳು ಜಾರಿಗೊಳ್ಳದೆ ಹಾಗೆ ಉಳಿದವು. ಕೃಷಿ ಭೂಮಿಯ ರಾಷ್ಟ್ರೀಕರಣ ಮತ್ತು ಜಮೀನಿನ ಮೇಲೆ ಜಾತಿ, ಭೇದವಿಲ್ಲದ ಸಾಮೂಹಿಕ ಒಡೆತನ, ಸಾಮೂಹಿಕ ದುಡಿಮೆ, ಆರ್ಥಿಕ ಸ್ವಾವಲಂಬನೆಯಲ್ಲಿ ಮಹತ್ತ್ವದಾಯಕವಾದ ಚಿಂತನೆಗಳಾಗಿದ್ದವು. ಅವು ಅಂಬೇಡ್ಕರ್‌ರ ದೂರಗಾಮಿ ಆಲೋಚನೆಗಳಿಗೆ ಸಾಕ್ಷಿಯಾಗಿದ್ದವು. ಇಂತಹ ಹತ್ತು ಹಲವು ಆಲೋಚನೆಗಳು ಅವರ ಬತ್ತಳಿಕೆಯಲ್ಲಿದ್ದರೂ ಅವು ಬೆಳಕಿಗೆ ಬಾರದೆ, ಬಳಕೆಯಲ್ಲಿ ಇರದೆ ಅಳಿಸಿ ಹೋಗಿವೆ ಎಂದರೆ ತಪ್ಪಾಗಲಾರದು.

**ಸಮಾರೋಪ:**

ಇಂದು ಪರಿಶಿಷ್ಟ ಜಾತಿ, ವರ್ಗ, ಹಿಂದುಳಿದ ವರ್ಗಗಳ ಏಳಿಗೆಯು ಒಂದು ರಾಷ್ಟ್ರೀಯ ಸಮಸ್ಯೆಯಾಗಿ ಉಳಿಯುತ್ತ ಬಂದಿದೆ. ಕಳೆದ ನಲವತ್ತು ವರ್ಷಗಳಿಂದ ಅಂದರೆ 1991 ರಿಂದ ಮಾಹಿತಿ ತಂತ್ರಜ್ಞಾನದಿಂದ ಪ್ರಾರಂಭವಾಗಿ 2018ರ ಮೇಕಿಂಗ್ ಇಂಡಿಯಾ ವರೆಗೆ ಅನೇಕ ಯೋಜನೆಗಳು ಹತ್ತಾರು ಭಾಗ್ಯಗಳು ಅಪಾರ ಪ್ರಮಾಣದ ಆರ್ಥಿಕ ನೆರವು ನೀಡಲಾಗಿದೆ. ಆದರೂ ಸಮಾಜದಲ್ಲಿ ಆರ್ಥಿಕ ದುರ್ಬಲ ವರ್ಗ ಸಾಮಾಜಿಕವಾಗಿ ಮುಖ್ಯವಾಹಿನಿಯಲ್ಲಿ ಬಂದು ಮಹತ್ತರವಾದ ಸಾಧನೆ ಮಾಡುವಲ್ಲಿ ವಿಫಲವಾಗಿದೆ. ಬಡತನ ನಿರ್ಮೂಲನೆ ಅಸಾಧ್ಯವೇನೋ ಅನಿಸುವಷ್ಟರ ಮಟ್ಟಕ್ಕೆ ಬಂದು ನಿಂತಿದೆ. ದೌರ್ಜನ್ಯ, ದಬ್ಬಾಳಿಕೆ, ಕೊಲೆ, ಸುಲಿಗೆ, ಮೋಸ, ಸಂಪತ್ತಿನ ಕ್ರೋಢಿಕರಣಕ್ಕಾಗಿ ನಡೆಯುತ್ತ ಕಾನೂನೆ ಭಯಪಡುವ ಮಟ್ಟಕ್ಕೆ ನಡೆಯುತ್ತಿವೆ. ಇದರ ಪರಿಣಾಮ ಜನ ಅನ್ಯ ಧರ್ಮಕ್ಕೆ ಮತಾಂತರ ಹೊಂದುತ್ತ ಅಲ್ಲಿಯೂ ನೆಮ್ಮದಿ ಕಾಣದೆ, ಅತ್ತ ಇರಲೂ ಆಗದೆ ಇತ್ತ ಬದುಕಲೂ ಆಗದೆ ನರಳುತ್ತಿದ್ದಾರೆ. ಮತಾಂತರದಲ್ಲೂ ಹಣ ಸಂಪಾದನೆ ಮಾಡುತ್ತಿರುವ ಹುನ್ನಾರಗಳು ಕಂಡುಬರುತ್ತಿವೆ. ಇಷ್ಟಾದರೂ ಅಸ್ಪೃಶ್ಯತೆ, ಜಾತಿಯತೆಯ ಪಿಡುಗು ಸಮಸ್ಯೆಯಾಗಿಯೇ ಉಳಿದಿದೆ. ವಿದ್ಯಾವಂತ ಪ್ರಜ್ಞಾಹೀನನಾಗಿ ಮಾನವೀಯತೆ ಮರೆತಿದ್ದಾನೆ, ತತ್ತ್ವಸಿದ್ಧಾಂತಗಳು ಭ್ರಷ್ಟತೆಯಲ್ಲಿ ಕಳೆದು ಹೋಗಿದೆ. ಈ ಕಾಲಘಟ್ಟಕ್ಕೆ ರಾಷ್ಟ್ರಭಕ್ತಿಯುಳ್ಳ ಪ್ರತಿಯೊಬ್ಬ

ಚಿಂತಕನೂ ಮತ್ತೆ ಮತ್ತೆ ಅಂಬೇಡ್ಕರ್‌ರ ಸಮ ಸಮಾನತೆಯ ವಿಚಾರಗಳನ್ನು ಚರ್ಚಿಸುವ ಅವಶ್ಯಕತೆ ಇಂದಿಗೆ ಅಗತ್ಯವೂ, ಅವಶ್ಯವೂ ಆಗಿದೆ.

## ಪರಾಮರ್ಶನ ಗ್ರಂಥಗಳು:


1. ದತ್ತೋಪಂತ ಠೇಂಗಡಿ (ಮೂಲ), ಚಂದ್ರಶೇಖರ ಭಂಡಾರಿ (ಅನು), (2011), ಸಾಮಾಜಿಕ ಕ್ರಾಂತಿಸೂರ್ಯ ಡಾ. ಬಾಬಾ ಸಾಹೇಬ ಅಂಬೇಡ್ಕರ್, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು.
2. ಅಂಬೇಡ್ಕರ್ ಬಿ. ಆರ್. , (2017), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು, ಸಂಪುಟ–1, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
3. ಅಂಬೇಡ್ಕರ್ ಬಿ. ಆರ್. , (2017), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು, ಸಂಪುಟ–2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
4. ಅಂಬೇಡ್ಕರ್ ಬಿ. ಆರ್. , (2017), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು, ಸಂಪುಟ–3, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
5. ಅಂಬೇಡ್ಕರ್ ಬಿ. ಆರ್. , (2017), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು, ಸಂಪುಟ–4, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
6. ದೇವನೂರು ಮಹಾದೇವ, (2013), ಎದೆಗೆ ಬಿದ್ದ ಅಕ್ಷರ, ಅಭಿನವ, ಬೆಂಗಳೂರು.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.

**About the License:**


© The Authors 2024. The text of this article is open access and licensed under a Creative Commons Attribution 4. 0 International License.